# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **116(99)**

ಸದಸ್ಯರ ಹೆಸರು : ಶ್ರೀ ಡಿ.ಟಿ ಶ್ರೀನಿವಾಸ್ (ಡಿ.ಟಿ.ಎಸ್)
(ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 11.08.2025

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆಯಿಂದ ಶಾಲೆಗಳನ್ನು ಮುಚ್ಚುವಾಗ ಆ ಶಾಲೆಗಳ ಶಿಕ್ಷಕರನ್ನು ವಿಳಂಬ ಮಾಡದೇ ಬೇರೆ ಶಾಲೆಗಳಿಗೆ ನಿಯೋಜಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಸರ್ಕಾರದ ಪತ್ರ ಸಂಖ್ಯೆ: ಇಡಿ 46 ಎಸ್‌ಇಎಸ್ 2013 ದಿನಾಂಕ: 28-02-2023 ರಂತೆ ಅನುದಾನಿತ ಶಿಕ್ಷಕರು ಇತರೆ ಶಾಲಾ ಆಡಳಿತ ಮಂಡಳಿಯ ಒಪ್ಪಿಗೆಯನ್ನು ಪಡೆದು ಶಾಲೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳಿಗೆ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಿದ ಶಿಕ್ಷಕರ ಸ್ಥಳ ನಿಯುಕ್ತಿಯನ್ನು ಅನುಮೋದಿಸಲಾಗುತ್ತಿದೆ.<br><br>ಖಾಸಗಿ ಅನುದಾನಿತ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕೊರತೆಯಿಂದ ಶೂನ್ಯ ಶಾಲೆಗಳಾದ ಸಂದರ್ಭದಲ್ಲಿ, ಸದರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಅಗತ್ಯವಿರುವ ಅನುದಾನಿತ / ಸರ್ಕಾರಿ ಶಾಲೆಗಳಿಗೆ ತಾತ್ಕಾಲಿಕವಾಗಿ ವರ್ಕಿಂಗ್ ಅರೇಂಜ್‌ಮೆಂಟ್ ಮಾಡಿ ವೇತನ ಸೌಲಭ್ಯಗಳನ್ನು ನೀಡಲು ಉಪನಿರ್ದೇಶಕರಿಗೆ ಸೂಚಿಸಲಾಗಿರುತ್ತದೆ. |
| ಆ) | ಅನುದಾನಿತ ಶಾಲೆಗಳ ವಿದ್ಯಾರ್ಥಿಗಳ ಅನುಪಾತವನ್ನು ಪ್ರತಿ ತರಗತಿಗೆ ಈಗ ಇರುವ 25 ವಿದ್ಯಾರ್ಥಿಗಳಿಂದ 20 ವಿದ್ಯಾರ್ಥಿಗಳಿಗೆ ಇಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ; ಕೈಗೊಂಡಿದ್ದರೆ ಮಾಹಿತಿ ನೀಡುವುದು; | ಅನುದಾನಿತ ಶಾಲೆಗಳ ವಿದ್ಯಾರ್ಥಿಗಳ ಅನುಪಾತವನ್ನು ಪ್ರತಿ ತರಗತಿಗೆ ಈಗ ಇರುವ 25 ವಿದ್ಯಾರ್ಥಿಗಳಿಂದ 20 ವಿದ್ಯಾರ್ಥಿಗಳಿಗೆ ಇಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | ಅನುದಾನಿತ ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ, ಸರ್ಕಾರಿ ಶಾಲೆಗಳಿಗೆ ಕೊಡುವ ಹಾಗೆಯೇ ಅತಿಥಿ ಶಿಕ್ಷಕರುಗಳನ್ನು ಅನುದಾನಿತ ಶಾಲೆಗಳಿಗೂ ನೇಮಕ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ಅನುದಾನಿತ ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ಸರ್ಕಾರಿ ಶಾಲೆಗಳಿಗೆ ಕೊಡುವ ಹಾಗೆಯೇ ಅತಿಥಿ ಶಿಕ್ಷಕರುಗಳನ್ನು ಅನುದಾನಿತ ಶಾಲೆಗಳಿಗೂ ನೇಮಕ ಮಾಡಲು ಶಿಕ್ಷಣ ಕಾಯ್ದೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು